Regd No BG 155 — ೫೮ — 21—4—1961

Sri
"SATYAVADI"
— DAILY —
MYSORE 4
45 th Year
Protect the cow

ಸತ್ಯವಾದಿ

ಸ್ವಾಮಿಕರು— ಅರಮನೆ ಸಿಂಪ್ಲೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಶ್ರೀ ವಾಸವಿ ವೈಶ್ಯಮಾನಸಗಳಿಗೆ
ಆರ್ಯವೈಶ್ಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಚಂದಾದಿಗೆ 6 ರೂಪಾ

ಗೋಸಂರಕ್ಷಣೆ ಮಾಡಿ

ಸರ್ವೋದಯ ಕಾರ್ಯಕ್ಕೆ ಅಧಿಕ ಪ್ರಸಾದರು

ಲೆಜಿಸ್ಲೇಟರ್ಸ್ ಹೋಂ ಘಟನೆ

ಬೆಂಗಳೂರು 20 — ಲೆಜಿಸ್ಲೇಟರ್ಸ್ ಹೋಂನಲ್ಲಿ ನಡೆದ ಘಟನೆ ಬಗ್ಗೆ ಮುಖ್ಯ ಮಂತ್ರಿಗಳು ಇಂದಿಲ್ಲಿಂದು ದಿನಗಳಲ್ಲಿ ಹೇಳಿಕೆ ಕೊಡುವರೆಂದು ಶಾಸನ ಸಭೆಯ ಸ್ಪೀಕರು ತಿಳಿಸಿದರು

ಂ ಂ

ಬೆಂಗಳೂರು 20— ಲೆಜಿಸ್ಲೇಟರ್ಸ್ ಹೋಂನಲ್ಲಿ ನಡೆದ ಹೇಣುಕೃತ್ಯ ಸಂಬಂಧದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ ಇಲ್ಲಿಗೆ ತಂಬಾಕು ಬೆಳೆಗಾರರ ಪ್ರಮುಖ ಕಾಂಗ್ರೆಸ್ಸು ಕಾರ್ಯಕರ್ತ ಯುವಕನಪ್ಪ ಬಸಪ್ಪ ಹಾಯಣ್ಣನನ್ನು ಮ್ಯಾಜಿಸ್ಟ್ರೇಟರು ತಾ || 24 ರವರೆಗೆ ಜುಡಿಷಿಯಲ್ ಕಸ್ಟಡಿಗೆ ರಿಮ್ಯಾಂಡು ಮಾಡಿದರು — ಹೋಮಿನ ಅಳ ಚಿಕ್ಕತಿಮ್ಮಯ್ಯನು ಅಗಲೇ ಜುಡಿಷಿಯಲ್ ಕಸ್ಟಡಿಗೆ ರಿಮ್ಯಾಂಡು ಮಾಡಲ್ಪಟ್ಟಿರುವನು — ಒಬ್ಬ ಮಂದಿ ಹೆಂಗಸು ಜಾಮೀನಿನ ಮೇಲೆ ಬಿಡಲ್ಪಟ್ಟಿರುವಳು — ಈ ಮೂವರೂ ತಾ || 9 ರಂತೆ 20 ವರ್ಷದ ಯುವತಿಯನ್ನು ಲೆಜಿಸ್ಲೇಟರ್ಸ್ ಹೋಂಗೆ ಅನೀತಿ ಕಾರ್ಯಕ್ಕಾಗಿ ಕರೆದುಕೊಂಡು ಹೋದರೆಂದು ಆಪಾದಿಸಲಾಗಿದೆ.

★

ಉದ್ಘಾಟನೆ

ಬಿಜಾಪುರ 20 — ಗುಲೇದಗುಡ್ಡ ಮತ್ತು ಬನಹಟ್ಟಿ ಪಟ್ಟಣಗಳಲ್ಲಿ ಬುಧವಾರ ನೀರು ಸಂಬರಾಜು ಯೋಜನೆಗಳನ್ನು ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಉದ್ಘಾಟಿಸಿದರು.

ಹಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಕ್ಕಯ್ಯಜೋಯಿಸರಿಂದ
22 ತಾರೀಖಿಗೆ ಪ್ರಮಾಣ ಪುನರ್ವಸು
ಗಂಗಾಪ್ರಮಾಣ

ಪೇಷ್ಕರ್ ನಿಲ್ಲಿಸಲಾಗುತ್ತೆ

ಈಗ ಪೇಷ್ಕರ್ ವಾಳ್ಯೇಗಾರಿಂದ್ವಿವಂಶಸ್ಥರ ನಿಧನ ನಂತರ ವಾಳ್ಯೇಗಾರು ವಂಶಸ್ಥರಿಗೆ ಪೇಷ್ಕರ್ ನಿಲ್ಲಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಜತ್ತಿಯವರು ನಿನ್ನೆ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

★

ಅಪ್ಪರ್ ಕೃಷ್ಣಾ ಪ್ರಾಜೆಕ್ಟು

ಬೆಂಗಳೂರು 20— ಅಪ್ಪರ್ ಕೃಷ್ಣಾ ಪ್ರಾಜೆಕ್ಟು ಮೂರು ಹಂತದಲ್ಲಿ ಮುಗಿಸಲ್ಪಡುವುದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಬಂಧನ

ಮದರಾಸು 20— ಜಾರ್ಜ್‌ಟೌನ್ ಭಾಗದಲ್ಲಿ ದ್ರವಿಡ ಮುನ್ನೇತ್ರ ಸಂಘದ 'ಲಾಯರ್' ವಿಂಗ್' ನ ಸದಸ್ಯರು ಅಥವಾ ಸಹಾನುಭೂತಿ ಉಳ್ಳವರಾದ 19 ಮಂದಿ ಬಂಧಿಸಲ್ಪಟ್ಟರು.

ಚೀಣಾದ ಆಹ್ವಾನ

ಕಟ್ಮಂಡು 20— ರಾಜ ಮಹೇಂದ್ರರು ಚೀನಾಕ್ಕೆ ಆಹ್ವಾನಿಸಲ್ಪಟ್ಟಿರುವುದಾಗಿ ಪ್ರಕಟವಾಗಿದೆ

ಸ್ಕೂಟರು ಫ್ಯಾಕ್ಟರಿ

ನವದೆಹಲಿ 20— ದೆಹಲ್ಲಿ ಹತ್ತಿರ ಫರಿದಾಬಾದು ಕೈಗಾರಿಕಾವಸಾಹತಿನಲ್ಲಿ ಮೋಟಾರು ಸೈಕಲ್ ಮತ್ತು ಸ್ಕೂಟರ್ ಫ್ಯಾಕ್ಟರಿ ಸ್ಥಾಪಿಸಲಾಗುವುದು.

★

ಕಮ್ಯುನಿಸ್ಟರಿಗೆ ಬಿಡೆವು

ವಾಷಿಂಗ್ಟನ್ 20— ಕ್ಯೂಬಾವನ್ನು ಕಮ್ಯುನಿಸ್ಟರಿಗೆ ಬಿಡಲು ಅಮೇರಿಕಾ ಇಚ್ಛಿಸುವದಿಲ್ಲವೆಂದು ಅಧ್ಯಕ್ಷ ಕೆನಡಿ ಹೇಳಿದರು.

ಅಗ್ನಿ ಅನಾಹುತ

ನವದೆಹಲಿ 20— ಗುರುವಾರ ಮಧ್ಯಾಹ್ನ ಹಳೇ ದೆಹಲಿಯ ಬಿಲಾತಿಸ್ತೆಯಲ್ಲಿ ಸಾವಿರ ಗುಡಿಸಲು ಅಗ್ನಿಗೆ ಅಗ್ನಿಗೆ ಆಹುತಿಯಾಗಿ ಹತ್ತು ಮಂದಿ ಸತ್ತು ಹತ್ತು ಮಂದಿ ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿದರು — ಅಗ್ನಿ ಆರಿಸಲು 12 ಫೈರ್ ಎಂಜಿನ್ ಗಳೂ ಶ್ರಮಿಸಿದ್ದವು — ಸುಮಾರು 5000 ಮಂದಿಗಿಂತ ಹೆಚ್ಚು ಮನೆವಿಹಗಳಿಲ್ಲದವರಾಗಿರುವರು.

ಹಾಸನ-ಮಂಗಳೂರು

ನವದೆಹಲಿ 20— ಹಾಸನ-ಮಂಗಳೂರು ರೈಲ್ವೆ ಹಾಕುವದನ್ನು ಮುಂದಿನ ಯೋಜನೆಯಲ್ಲಿ ಸೇರಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಚುನಾವಣೆ

ಭುವನೇಶ್ವರ 20— ಒರಿಸ್ಸಾ ಶಾಸನ ಸಭೆಗೆ ಸದಸ್ಯರನ್ನು ಆಯ್ಕೆಮಾಡಲು ಜೂನ್ 2 ರಿಂದ 8 ರವರೆಗೆ ಚುನಾವಣೆ ನಡೆಯುವುದು.



ಅಧ್ಯಕ್ಷ ಪ್ರಸಾದರು ಅಧ್ಯಕ್ಷತೆ ವಹಿಸಿಬಂದ್ದರಿಯಿಂದ ಬಿಡುಗಡೆ ಹೊಂದಿದ ನಂತರ ಸರ್ವೋದಯ ಕಾರ್ಯ ಕೈಗೊಳ್ಳುವ ಇಚ್ಛೆ ಇರುವುದಾಗಿ ತಿಳಿಸಿದರು.

★

ತಪ್ಪು ಹೆಜ್ಜೆ

ದೆಹಲಿ 20— ಕ್ಯೂಬಾದ ಒಳಾಡಳಿತದಲ್ಲಿ ಹೊರಗಿನ ಕೈವಾಡವು ಮತ್ತು ಅಮೇರಿಕಾದಿಂದ ಸ್ವಯಂ ಸೇವಕರು ಮತ್ತು ಇತರರಿಂದ ಕ್ಯೂಬಾ ಮೇಲೆ ಆಕ್ರಮಣವು ವ್ಯಸನಕರವಾದು ದೆಂದೂ ಪ್ರಧಾನಿ ನೆಹರೂ ಅಭಿಪ್ರಾಯ ಪಟ್ಟಿರುವರು.

★

ರೈಲ್ವೆ ಅವಘಡ

ಕಲ್ಕತ್ತಾ 20— ಈಶಾನ್ಯ ಗಡಿ ರೈಲ್ವೆಯ ಸಿಲಿಗುರಿ ಜಂಕ್ಷನ್ನಿನ ಹತ್ತಿರ ಅಮಿಗಾಂಗ್-ಮನಹರಘಾಟ್ ನಾರ್ತ್ ಎಕ್ಸ್‌ಪ್ರೆಸ್ ಅವಘಡಕ್ಕೀಡಾಗಿ 23 ಮಂದಿ ಪ್ರಯಾಣೀಕರು ಸತ್ತು 81 ಮಂದಿ ಗಾಯಗೊಂಡರು ; ಇದು ಬುಧವಾರ ರಾತ್ರಿ ನಡೆದುದು.

ಭಾರತದೊಂದಿಗೆ ಅಮೇರಿಕಾದ ಆದಿಕಾಲದ ವ್ಯಾಪಾರ

1812 ರ ಆದಿಯಲ್ಲಿ ಮೆಸಾಚುಸೆಟ್ಸ್ ಸಂಸ್ಥಾನದ ಸೇಲಂನಿಂದ ಕ್ಯಾಂ ಪ್ಟಾ ಯಾನ ಹೊಂಟಾಗ, ಅದರ ಕೆಪ್ಪ್ತನ ವಶದಲ್ಲಿ ಭಾರತದ ವಸ್ತುಗಳನು ಸು ಲು 200 ಬೆಳ್ಳಿಯ ಡಾಲರುಗಳೂ, ಅವನ ಕುಟುಂಬದವರೂ ಹಾಗೂ ಸ್ನೇಹಿತರಿಂದ ಅನೇಕ ಸಾಮಾನುಗಳಿಗೆ ಬೇಡಿಕೆಗಳೂ ಇದ್ದವು ; ತಮ್ಮ ಪತ್ನಿಯು ಕೆಲವರು ಹವಳದ ಕುಶಲಾಹಾರಗಳನ್ನೂ ವಾತ್ತೆ, ಕೆಲವರು ಬಹು ಪ್ರಿಯ ವಾದ ಮೆಣಸು ಪರಿಮಳಭರಿತ ಪಂಸ್ಟ್ ಬಟ್ಟೆಯಾನ್ನು ಅಥವಾ ಶುಂಠಿಯ ಉಪ್ಪಿನ ಕಾಯಿಯನ್ನು ತರುವಂತೆ ಕೇಳಿದ್ದರು ; ಹೆನ್ರಿ ಪಿಕರಿಂಗ್ ಎಂಬಾತ ಸಂಸ್ಕೃತದ ಗ್ರಂಥವನ್ನು ತರುವಂತೆ ಕೇಳಿದ್ದನು : ಹೊಸ ಇಂಗ್ಲೆಂಡ ಈ ಘನವಂತ ವ್ಯಾಪಾರಿಗೆ ಆವುದೇ ಗ್ರಂಥ ದೊರಕಿತೋ ಇಲ್ಲವೋ, ಒಂದು ಸಮಯ ಅದು ದೊರಕಿದ್ದರೆ ಅವನು ಅದನ್ನೇನೋ ಮಾಡಿದ ಎಂಬುದನ್ನು ಯಾರೂ ಅರಿಯರು.

ಬಹು ಕಷ್ಟಸಾಧ್ಯವಾದ ಪ್ರವಾಸ, ಹೂಗ್ಲಿ ನದಿಯ ಮುಖದಲ್ಲಿ ಪ್ರಚಂಡ ಬಿರುಗಳಿ ಬೀಸುತ್ತಿದ್ದಾಗ ಕ್ಯಾಂಟಾ ಹೂಗ್ಲಿ ನದಿಯ ಮುಂಭಾ ದಿಣ್ಣೆಯನ್ನು ಸವಿಾಪಿಸಿ, ಹೇಗೋ ಸುರಕ್ಷಿತ ಸ್ಥಳವನ್ನು ತಲಪಿತು ; ವಾಪಸ್ಸು ಮುಂಬಯಿಗೆ ಹಿಂತಿರುಗುವಾಗ ಇಂಗ್ಲೀಷರು ಕ್ಯಾಪ್ಟಾನ್ನು ಸೆರೆ ಹಿಡಿದರು (1812 ರಲ್ಲಿ ಅಮೇರಿಕಾಕ್ಕೂ ಇಂಗ್ಲೆಂಡಿಗೂ ಯುದ್ಧ ನಡೆಯುತ್ತಿತ್ತು) ; ಆನಂತರ ಧೈರ್ಯಶಾಲಿಯಾದ ಕ್ಯಾಪ್ಟನ್ನು ಒಬ್ಬ ಅದನ್ನು ಪುನರ್ವಶಪಡಿಸಿಕೊಂಡು ಸೇಲಮ್ಮಿಗೆ ವಾಪಸ್ಸು ತಂದ ಎಂಬುದು ಒಂದು ಕಥೆ

ಪೂರ್ವಕ್ಕೆ ಅಮೇರಿಕಾ ಹಡಗುಗಳು ತರುತ್ತಿದ್ದ ಸಾಮಾನುಗಳು ವೈವಿಧ್ಯಮಯವಾದವು ; ಪ್ರಧಾನವಾಗಿ ಬೆಳ್ಳಿ, ಭಂಗಾರ, ಮೆಡಿಟರ್ರೇನಿಯನ್ ನಂತಹ ವಸ್ತುಗಳು, ಸಕ್ಕರೆ, ತುಂಬಿ, ನೀಲಿ, ಗೋಣಿಚೀಲ ಪಟ್ಟುಪ್ಪು, ರೇಶ್ಮೆ ಮತ್ತು ಹತ್ತಿಯ ಅನೇಕ ಒಗೆಯ ವಸ್ತುಗಳು ಮತ್ತು ಮೆಣಸು, ಇವು ಭಾರತದ ಉಪ್ಪುಗಳು ; ಒಂದು ಕಾಲದಲ್ಲಿ ಸೇಲಂ ಮೆಣಸಿಗೆ ಪ್ರಪಂಚದ ಉಗ್ರಾಣವಾಗಿತ್ತು : ಮತ್ತು ಈ ಒಂದರಿನ ವ್ಯಾಪಾರ ಅರ್ಧ ಲಕ್ಷ ಟನ್ನು ಮೆಣಸು 1805 ರಲ್ಲಿ ಸಾಗಿ ಹೋಯಿತು ; ಪ್ರಚಲಿತ ಸಮಯದಲ್ಲಿ ಭಾರತದಿಂದ ಅತ್ಯಧಿಕ ಮೆಣಸನ್ನು ಕೊಳ್ಳುವ ರಾಷ್ಟ್ರ ಅಮೇರಿಕವೇ : 1959 ರಲ್ಲಿ ಅವೇರಿಕಾ 5000 ಟನ್ನುಗಳಷ್ಟು ಅಂದರೆ ಭಾರತದ ಉಪ್ಪು ಮೊತ್ತದ ಮುಕ್ಕಾಲನೇ ಒಂದು ಭಾಗವನ್ನು ಗೊಂಡಿತು.

1833 ರಿಂದ ಬೋಸ್ಟನ್ನಿನಿಂದ ಕಲ್ಕತ್ತಕ್ಕೆ ಐಸನು (ಮಂಜುಗಡ್ಡೆ ಸಾಗಿ ಸುತ್ತಿದ್ದುದು ಸ್ವಾರಸ್ಯದ ಸಂಗತಿ .... ಐಸನ್ನು 15000 ಮೈಲಿಗಳ ದೂರದ ಉಷ್ಣದ ಹಾದಿಯಲ್ಲಿ ಹೇಗೆ ತಂಪಾಗಿಯಿತೆಂಬುವುದೂ ಸ್ಕೂ ಇಂಗ್ಲೆಂಡಿನ ಕುಶಲ ತೆಗೆ ಸಲ್ಲುವ ಮೆಚ್ಚುಗೆ, ಸುಗಂಧಪೂರಿತ ಪೈಕ್ ಮಂಸ ಹುಡಿಯಲ್ಲಿ ಐಸನ್ನು ಮುಚ್ಚಿಡಲಾಗಿತ್ತು. ಈ ಶೀತದ ವೈಭವವನ್ನು ಅರಿಯಂದಿದ್ದ ಕಲ್ಕತ್ತದ ಪೌಂಡು ಐಸ್ ಹೇಗೆ ಬೆಳೆಯುತ್ತದೆ ಎಂದು ಕೇಳುತ್ತಿದ್ದರು.

ನಿಮಗೆ ಬಲಹೀನತೆ ಉಂಟೇ ?

ಹಾಗಾದರೆ ವೈದ್ಯರಾದ ಎ. ಎಲ್ ಸರ್ಕಾರ್ (ಸರ್ಕಾರ್ ರಿಜಿಸ್ಟರ್ಡ್) ಮತ್ತು ಡಾ|| ಎಸ್. ಎಂ. ಆರ್. ಮೋಥಿವಾಲ್ರನ್ನು ಖುದ್ದು ಭೇಟಿಮಾಡಿ ಅವರು ನಿಮಗಳ ನಿಶ್ಯಕ್ತಿ, ಬಹುಮೂತ್ರ, ಮೂಲಾ ವ್ಯಾಧಿ ಮುಂತಾದ ವ್ಯಾಧಿಗಳಿಗೆ ವಿಫಲವಾಗದ ಚಿಕಿತ್ಸೆ ನಡೆಸುವರು

ನರಗಳ ನಿಶ್ಯಕ್ತಿಗೆ ವಿದ್ಯುಚ್ಛಕ್ತಿ (ಎಲೆಕ್ಟ್ರಿಕ್ ಥೆರೊಪಿ) ಮೂಲಕ ಚಿಕಿತ್ಸೆ

ಸಲಹೆಯ ಕಾಲ : ಬೆಳಿಗ್ಗೆ 9 ರಿಂದ 1 ಗಂಟೆ ಸಂಜೆ : 5 ರಿಂದ 6-30 ಗಂಟೆ
ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆ

ಸರ್ಕಾರ್ ಡಿಸ್ಪೆನ್ಸರಿ

263 ರಘುಲಾಲ್ ಅಂಡ್ ಕೋ ಬಳಿ, ಮೈಸೂರು

At Woodlands : Crowded 3rd Week

ಹರ್ಕ್ಯುಲಿಸ್ ಅನ್‌ಥೇನ್ಡ್

ಪ್ರಪಂಚದ ಅತ್ಯಂತ ಬಲಶಾಲಿಯಾದ ಮಾನವನ ಅದ್ಭುತ ವಿಜಯ, ಯುತಸ್ಸು, ಅಪ್ರತಿಮ ಸಾಹಸ ಪ್ರದರ್ಶನದ ಈ ಚಿತ್ರರತ್ನವನ್ನು ಇಂದೇ ನೋಡಿ

HERCULES UNCHAINED

Steve Reeves as Hercules — — in Eastman Color

See— War of Chariots, Arena of Tigers, Court of Lover, Temptress Lydia, Contest of Giants, Combat of Kings

ಆಪೆರಾ— 20-4-61 ರಿಂದ ಅಮೋಘ ಆರಂಭ

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಹಿಂದಿ ಚಿತ್ರ

ಆಪ್ಕಾ ಘರ್ [ಹಿಂದಿ]

ತಾರಾಗಣ— ಪ್ರೇಮನಾಥ್, ನಂದಾ, ಶ್ಯಾಮ, ಕಮ್ಮೊ

ದಿನವಹಿ 3 ಆಟಗಳು

SHAKTI SUDHA

A Superb Tonic

ITEOL-3

THE IDEAL ANTISEPTIC

Non-poisonous, non-corrosive and pleasant smelling. Available in 4 oz and 16 oz. bottles and 1 gallon tins.

TRADE MARK

THE MYSORE INDUSTRIAL & TESTING LABORATORY LTD., BANGALORE-3.
Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71 / 4 Arcot Sreenivasachar St., Bangalore 2.

Edited, Printed & Published by the Proprietor Dharma-Prachara Nirata M. S. Krishna Rao, at the Satyavadi Press Chamarajpuram, Mysore 4.